## 5

ಸಿಗ್ನಲ್ಲು ಬಿತ್ತು. ನಾಲಕ್ಕು ಹೆಜ್ಜೆ ಮುಂದೆ ಹಾಕಿದ ರಾಧಾಳ ಮುಂದೊಂದು ಭಯಂಕರ ಉದ್ದ ಮತ್ತು ಅಗಲವಿದ್ದ ಬಿಳಿ ಕಾರೊಂದು ನಿಂತಿತು. ಬೇರೆಲ್ಲಾ ಗಾಡಿಗಳಿಗಿಂತ ಅದರ ಗಾಜುಗಳು ತುಸು ಹೆಚ್ಚೇ ಕಪ್ಪಗಿದ್ದವು. ಡ್ರೈವರ್ ಪಕ್ಕದ ಸೀಟಿನ ಕಡೆ ಬಂದು ಗಾಜನ್ನು ಮೊಟಕಿದಾಗ 'ಝುಯ್' ಎಂದು ಸದ್ದು ಮಾಡುತ್ತಾ ಇಳಿದ ಗಾಜಿನ ಹಿಂದೆ ಕಣ್ಣಿಗೆ ಬಂಗಾರದ ಕಟ್ಟಿನ ಕಪ್ಪು ಕನ್ನಡಕ ಹಾಕಿದ ವ್ಯಕ್ತಿಯೊಬ್ಬ ಇವಳತ್ತ ನೋಡಿ ಜೇಬಿಗೆ ಕೈ ಹಾಕುತ್ತಿದ್ದ. ಅವನ ಹತ್ತೂ ಬೆರಳುಗಳಿಗೆ ಉಂಗುರಗಳಿದ್ದವು. ಜೊತೆಗೆ ವಾಚು, ಕೊರಳ ಸರ ಎಲ್ಲವೂ ಬಂಗಾರದ್ದೇ. ಜೇಬಿನಿಂದ ಐದು ನೂರರ ನೋಟು ಹೊರ ಬಂತು, ಎತ್ತಿ ರಾಧಾಳ ಕೈಗಿತ್ತು ಕೈ ಮುಗಿದ. ನೋಟು ತನಗೇ ಎಂದು ನಂಬಲಾಗದ ರಾಧಾಳಿಗೆ 'ಚಿಲ್ರೆ ಇಲ್ಲ' ಎನ್ನಲು ಬಾಯಿಗೆ ಬರುತ್ತಿದ್ದ ಮಾತುಗಳು ಗಂಟಲಲ್ಲೇ ಸಿಕ್ಕಿಕೊಂಡು ತಕ್ಷಣಕ್ಕೆ ಪ್ರತಿಕ್ರಿಯಿಸಲಾಗಿಲ್ಲ. 'ಒಳ್ಳೇ ಕೆಲ್ಸಕ್ಕ ಹೋಗಾಕತ್ತೀನಿ, ಆಶೀರ್ವಾದ ಮಾಡವಾ' ಎಂದು ಆ ವ್ಯಕ್ತಿ ಹೇಳಿದಾಗ ಒಮ್ಮೆಲೇ ಬಲಗೈಯಲ್ಲಿದ್ದ ಹತ್ತು ರೂಪಾಯಿಯ ನಾಣ್ಯವನ್ನು ಒಮ್ಮೆ ಹಲ್ಲಿಂದ ಕಡಿದು, ಎಡಗೈಯಲ್ಲಿನ ಹಸಿರು ಗಾಜಿನ ಬಳೆಗಳ ಉದ್ದಕ್ಕೂ ಎರಡು ಬಾರಿ ತಾಗಿಸಿ ಜೋರು ಸೌಂಡು ಬರಿಸಿ ನಗುತ್ತಾ ಅವನ ಕೈಗಿಟ್ಟ ನಂತರ ಅವನ ತಲೆ ಮೇಲೆ ಕೈಯಿಟ್ಟು 'ಎಲ್ಲಾ ಒಳ್ಳೇದಾಕ್ಕತೆ... ಹೋಗು' ಎಂದಳು. ಸಿಗ್ನಲ್ಲು ಬಿಟ್ಟಿತು. ಮತ್ತೆ 'ಝುಯ್' ಎಂದು ಗಾಜನ್ನು ಏರಿಸಿಕೊಂಡ ಕಾರು ಹೆಚ್ಚು ಸದ್ದು ಮಾಡದೇ ವೇಗವಾಗಿ ಹೊರಟಿತು.

ನೋಟನ್ನು ಜಾಕೀಟಿನೊಳಗೆ ಸಿಕ್ಕಿಸಿಕೊಳ್ಳುತ್ತಾ ಓಡಿ ಬಂದು ಫುಟ್‌ಪಾತಿನ ಟ್ರಾನ್ಸ್‌ಫಾರ್ಮರ್ ನೆರಳಲ್ಲಿ ನಿಂತಾಗ ಮೂರ್ನಾಲ್ಕು ದಿನಕ್ಕಾಗುವ ಕಮಾಯಿ ಒಮ್ಮೆಲೆ ಆದ ಖುಷಿಗೆ ನೋಟನ್ನು ಇಟ್ಟುಕೊಂಡಿದ್ದ ಜಾಗ ಜೋರಾಗಿ ಹೊಡೆದುಕೊಳ್ಳಲತ್ತಿತ್ತು. ಸುತ್ತಲೂ ನೋಡಿ ಜಾಕೀಟಿನೊಳಗಿದ್ದ ದುಡ್ಡನ್ನೆಲ್ಲಾ ತೆಗೆದು ಸಣ್ಣ ಪರ್ಸಿಗೆ ತುಂಬಿದಳು. ನಂತರ ಬೆನ್ನ ಹಿಂದಿದ್ದ ಕಾಂಪೌಂಡಿನ ಕಡೆ ಮುಖ ಮಾಡಿ ಸೀರೆಯನ್ನು ಎತ್ತಿ ಪರ್ಸನ್ನು ತನ್ನ ಒಳಚಡ್ಡಿಯ ಜೇಬಿನೊಳಗಿಟ್ಟು ಸೀರೆ ಸರಿ ಮಾಡಿಕೊಳ್ಳುತ್ತಾ ಮತ್ತೆ ರೋಡಿನ ಕಡೆ ತಿರುಗಿದಳು.

ಇಲ್ಲಿಂದ ಹೋಗಿದ್ದ ಆ ಕಾರು ಸುಕನ್ಯಾಳ ಹತ್ತಿರ ನಿಂತಿತ್ತು. ಅವಳು 'ಆಯ್ತು ಆಯ್ತು' ಎಂಬಂತೆ ತಲೆಯಾಡಿಸುತ್ತಿದ್ದಳು. ಕ್ಷಣಗಳ ನಂತರ ಅವಳ ಕಡೆಗಿನ ಸಿಗ್ನಲ್ಲು ಬಿಟ್ಟಾಗ ಕಾರು ಮಾಯವಾಯಿತು.

ಸುಕನ್ಯಾ ಓಡಿ ಬಂದು 'ಅವ್ನು ಯಾವನೋ ಸಾವ್ಕಾರ ನಿನೀಗೆ ಐನೂರ್ ಕೊಟ್ನಂತಲ್ಲಾ?' ಎಂದು ನಿಂತಾಗ ರಾಧಾ 'ಹೌದು' ಎಂದಳು. 'ನಡೀ ಹಂಗಂದ್ರೆ... ಇವತ್ತಿನ್ ಕೆಲ್ಸ ಸಾಕು' ಎಂದು ಕೈ ಹಿಡಿದೆಳೆದ ಸುಕನ್ಯಾಳಿಗೆ 'ಕೆಲ್ಸ ಬ್ಯಾಡ ಅಂದ್ರೆ ಮದ್ಯಾನ ಪಿಚ್ಚರ್ರಿಗೆ ಹೋಗಾನ' ಎಂದು ರಾಧಾ ಹುಬ್ಬಾರಿಸಿದಾಗ ಅವಳು 'ಇಗಾ ನೋಡು, ತೊಡಿ ಹೊಡುದ್ರೆ ರೈಲು ಹಿಂದುಕ್ಕೋಗಾ ಸಿನಿಮುಕ್ಕ ಬಾ ಅಂದ್ರೆ ನಾನ್ ಬರಾಕಿ ಅಲ್ಲ' ಎಂದು ಸಿಟ್ಟಾದಾಗ ರಾಧಾ, 'ಇಲ್ಲ ಬಾ ಸುಕ... ನನ್ ಬಂಗಾರ...' ಎಂದು ರಮಿಸಿ ಮತ್ತೆ ಕೆಲಸಕ್ಕೆ ಹಚ್ಚಿದಳು.

ಸಿಗ್ನಲ್ಲುಗಳ ಮೇಲೆ ಸಿಗ್ನಲ್ಲುಗಳು ಬಿದ್ದು ಊಟದ ಹೊತ್ತಾಯಿತು. ಇಬ್ಬರೂ 'ನಡೀ ಹೋಗಾನ' ಎಂದು ಸನ್ನೆ ಮಾಡಿಕೊಂಡರು.

## 6

ರೆಡ್ಡಿ ಸ್ಟ್ರೀಟಿನಲ್ಲಿ ಎಂದಿನ ಸಂಭ್ರಮದಲ್ಲಿ ಸಾಗುತ್ತಾ ಇಬ್ಬರೂ ಒಂದು ಕಡೆ ನಿಂತಾಗ ಎದುರಿಗೆ ಮರಿಯಣ್ಣನ ಹೋಟೆಲಿತ್ತು. ಗಲ್ಲಾದ ಮೇಲೆ ಕೂತಿದ್ದ ಮರಿಯಣ್ಣ 'ಲೇ ಕುಮಾರಾ, ಬಂತು